# ಜ್ಞಾನವೊಂದೇ ಸಾಕು ಮುಕ್ತಿಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 253.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 310.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 28.
4. **Note:** Lyrics mentioned without highlights are as per Ref. 1 and the wordings given in green highlights are as per Ref. 3. The wordings in Ref. 2 are a mix of Ref. 1 and Ref. 3. The lyrics in Ref. 3 seems to be more appropriate.
5. **Note:** Singer has followed lyrics as in Ref. 1.

ರಾಗ: ಮೋಹನ ತಾಳ: ಅಟ

ಜ್ಞಾನವೊಂದೇ ಸಾಕು ಮುಕ್ತಿಗೆ
ಇನ್ನೇನು ಬೇಕು ಹುಚ್ಚು ಮರುಳೆ ॥ ಪ ॥

ಪಿತ ಮಾತೆ, ಸತಿ ಸುತರಗಲಿರಬೇಡ
ಯತಿಯಾಗಿ ಅರಣ್ಯ ಚರಿಸಲುಬೇಡ
ವ್ರತ ನೇಮ ಮಾಡಿ ದಣಿಯಲು ಬೇಡ
ಸತಿಯಿಲ್ಲದವಗೆ ಸದ್ಗತಿಯಿಲ್ಲೋ ಮೂಢ ॥ ೧ ॥

ಜಪ ತಪವನೆ ಮಾಡಿ ದಣಿಯಲು ಬೇಡ
ಕಪಿಯಾಗಿ ಅಡಿಗಡಿಗ್ಹಾರಲು ಬೇಡ
ಉಪಮಾರರಸ ಕಾಶಿ ಕಳಿಯಲು ಬೇಡ
ಚಪಲತನದಲ್ಲಿ ಫಲವಿಲ್ಲೊ ಮೂಢ ॥ ೨ ॥

ಜಾಗ್ರತೆಯಲಿ ನಿದ್ರೆ ಕಳೆಯಲುಬೇಡ
ಆಗ್ರಹವನ್ನು ಬಿಟ್ಟು ಒಣಗಲುಬೇಡ

ಸೋಗು ಮಾಡಿ ಮಾತು ಕಳೆಯಲುಬೇಡ
ಗೂಗೆ ಹಾಗೆ ಕಣ್ಣು ಮುಚ್ಚಲುಬೇಡ || ೩ ||

ಹೆಣ್ಣು ಹೊನ್ನು ಮಣ್ಣು ಜರೆದಿಡಬೇಡ
ಅನ್ನ ವಸ್ತ್ರ ನೀನು ತೊರೆದಿಡಬೇಡ
ನನ್ನದೆಂದು ದೇಹ ನಂಬಲುಬೇಡ
ತಣ್ಣೀರು ಮುಣುಗಿ ನಡುಗಲುಬೇಡ || ೪ ||

ಮಹಾ ವಿಷ್ಣು ಮೂರ್ತಿಯ ಮರೆದಿರಬೇಡ
ನಾಯಾಸ ದಿನದಲ್ಲಿ ಶ್ರಮ ಬಿಡಬೇಡ
ಕುಹಕ ಬುದ್ಧಿಯಲಿ ಕುಣಿದಾಡಬೇಡ
ಪುರಂದರ ವಿಠಲನ್ನ ಮರೆತಿರಬೇಡ || ೫ ||

**Note:** Below mentioned lyrics, in green highlights, are as per Ref. 3 above

ರಾಗ: ರೇಗುಪ್ತಿ ತಾಳ: ಅಟ

ಜ್ಞಾನವೊಂದೇ ಸಾಕು ಮುಕ್ತಿಗೆ, ಇ –
ನ್ನೇನು ಬೇಕು ಹುಚ್ಚು ಮರುಳು ಮಾನವನೆ || ಪ ||

ಪಿತ ಮಾತೆ ಸತಿ ಸುತರನಗಲಿರಬೇಡ
ಯತಿಯಾಗಿ ಅರಣ್ಯ ಚರಿಸಲು ಬೇಡ
ವ್ರತ - ನೇಮವ ಮಾಡಿ ದಣಿಯಲು ಬೇಡ
ಸತಿಯಿಲ್ಲದವಗೆ ಸದ್ಗತಿಯಿಲ್ಲೋ ಮೂಢ || ೧ ||

ಜಪ ತಪವನೆ ಮಾಡಿ ಸೊರಗಲು ಬೇಡ
ಕಪಿಯಂತೆ ಅಡಿಗಡಿಗೆ ಹಾರಲು ಬೇಡ
(ಉಪವಾಸ ಪಾಶಕ್ಕೆ) ಸಿಕ್ಕಲು ಬೇಡ
ಚಪಲತನದಲೇನು ಫಲವಿಲ್ಲೋ ಮೂಢ || ೨ ||

ಜಾಗರದಲಿ ನಿದ್ರೆ ಕೆಡಿಸಲು ಬೇಡ
ಒಗರವನು ಬಿಟ್ಟು ಒಣಗಲು ಬೇಡ

ಸೋಗುಮಾಡಿ ಹೊತ್ತು ಕಳಿಯಲು ಬೇಡ
ಗೊಗೆ ಹಾಗೆ ಕಣ್ಣು ತಿರುಗಿಸಬೇಡ || ೩ ||

ಹೊನ್ನು - ಹೆಣ್ಣು - ಮಣ್ಣು ಜರೆದಿರ ಬೇಡ
ಅನ್ನ - ವಸ್ತ್ರಗಳನ್ನು ತೊರೆದಿರ ಬೇಡ
ಬಣ್ಣದ ದೇಹವ ನೆಚ್ಚಲು ಬೇಡ
ತಣ್ಣೀರೊಳಗೆ ಮುಳುಗಿ ನಡುಗಲು ಬೇಡ || ೪ ||

ಮಹಾ ವಿಷ್ಣು ಮೂರ್ತಿಯ ಮರೆತಿರ ಬೇಡ
ಸಾಹಸದಿಂದಲಿ ಶ್ರಮ ಪಡ ಬೇಡ
ಕುಹಕ ಬುದ್ಧಿಯಲಿ ಕುಣಿದಾಡ ಬೇಡ
ಮಹಿಮ ಪುರಂದರ ವಿಠಲನ ಮರೆಯದಿರೊ ಮೂಢ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇಲ್ಲಿ ಜ್ಞಾನ ಮಾರ್ಗದ ಪ್ರಶಂಸೆಯಿದೆ. ಸಂಸಾರದಲ್ಲಿ ಹೇಯ ಬುದ್ಧಿ, ಸಂನ್ಯಾಸ, ದೇಹ ದಂಡನೆ, ವ್ರತ, ನೇಮ, ಕರ್ಮ, ಮಡಿ, ಜಪ, ತಪಗಳು ಭಗವತ್ ಸಾಕ್ಷಾತ್ಕಾರಕ್ಕೆ ಪ್ರಧಾನ ಸಾಧನಗಳಲ್ಲ. ಸಂಸಾರದಲ್ಲಿದ್ದುಕೊಂಡೇ, ಸಾಮಾನ್ಯ ಜೀವನ ನಡೆಸುತ್ತಲೇ, ಮಾಹಾತ್ಮ್ಯ ಜ್ಞಾನವನ್ನು ಪಡೆದುಕೊಂಡು ಬಿಂಬಾಪರೋಕ್ಷ ಮಾಡಿಕೊಳ್ಳಬಹುದು.

**Classification:** Keerthane
**Ankita:** purandara vittala
**Location:** NA
**Category:** Mukti Marga, Bimba Roopa, Loka Neeti
**Sub-Category:** jnana, mukti, tande, patni, makkalu, kaadu, vrata, sadgati, japa, tapa, koti, upavasa, phala, nidde, goobe, kannu, bangara, hennu, anna, deha, niru, Vishnu, buddi, bimba roopa, samsara,
**Pravachana:** NA
**Explanation:** NA